ಶ್ರೀ ಡಿ. ದೇವರಾಜ ಅರಸ್.—ನಾನು ಇಲ್ಲಿ ಹೇಳಿಕೆಯನ್ನು ಕೊಟ್ಟ ಕೂಡಲೇ ಆ ವಿಚಾರವನ್ನು ಜಿಲ್ಲಾಧಿಕಾರಿಗಳಿಗೂ ಮತ್ತು ಇತರೇ ಸಂಬಂಧಪಟ್ಟ ಅಧಿಕಾರಿಗಳಿಗೂ ಮತ್ತು ಆ ವಿದ್ಯಾರ್ಥಿಗಳಿಗೂ ತಿಳಿಸುವಂತೆ, ಡೈರೆಕ್ಷನ್ ಕಳುಹಿಸಲಾಗಿದೆ. ಈ ವಿಚಾರದಲ್ಲಿ ಯಾರೂ ಅನುಮಾನ ಪಡಬೇಕಾದ್ದಿಲ್ಲ. ಪತ್ರಿಕೆಯಲ್ಲಿ ಬಂದಿರತಕ್ಕ ಹೇಳಿಕೆ ಒಂದು ವೇಳೆ ಸರಿಯಾಗಿಲ್ಲದಿರಬಹುದು. ಆ ವಿದ್ಯಾರ್ಥಿಗಳಿಗೆ ಸರಿಯಾದ ವಿಷಯ ಗ್ರಹಿಕೆ ಇಲ್ಲದೆ ಅವರು ಅನೇಕ ವೇಳೆ ತಪ್ಪುದಾರಿಗೆ ಹೋಗತಕ್ಕ ಸಂದರ್ಭಗಳೂ ಇರುತ್ತವೆ. ಈ ಆಜ್ಞೆಯಾನ ತಾರ್ಲೊಕಿಗೆ ಯಾವ ಗ್ರಾಮಕ್ಕೆ ಅನ್ವಯವುದನ್ನೆಲ್ಲಾ ಆ ಆಜ್ಞೆಯಲ್ಲಿ ವಿಶದಪಡಿಸಲಾಗಿದೆ. ಬಿಜಾಪುರದ ಜಿಲ್ಲೆಯಲ್ಲಿ ಯಾವ ಭಾಗಕ್ಕೆ ಕೊಡಬೇಕೆಂಬುದು ಅಲ್ಲಿನ ಅಧಿಕಾರಿಗಳಿಗೆ ಗೊತ್ತಿದೆ.

ಶ್ರೀ ಎಸ್. ಮೈ. ಪಾಟೀಲ್.—ಮುಖ್ಯಮಂತ್ರಿಗಳು ನಮಗೇಕೆ ಸ್ಪಷ್ಟವಾಗಿ ತಿಳಿಸಬಾರದು? ಪತ್ರಿಕೆಯವರಿಗೆ ಕೊಟ್ಟಿರತಕ್ಕ ಹೇಳಿಕೆಯನ್ನೇ ನಮಗೇಕೆ ಕೊಡಬಾರದು?

ಅಧ್ಯಕ್ಷರು.—ತಾವು ನಮಗೆ ಕೊಡಿ, ನಮಗೆ ಕೊಡಿ ಎಂದರೆ ಅವರು ಅಲ್ಲಿಂದ ಬಂದು ಕೊಡುವುದಕ್ಕಾಗುತ್ತದೆಯೇ? ಅವರ ಛೇಂಬರಿಗೆ ಹೋಗಿ ಕಾಣಿ. ಅಲ್ಲಿ ಮಾತನಾಡಿ

Constitution of a Study Team to Tour the drought affected Areas in the State

†**ಶ್ರೀ ವಾಟಾಳ್ ನಾಗರಾಜ್** (ಚಾಮರಾಜಪೇಟೆ):—ಕೊಡುತ್ತಾರೆ, ನೀವು ಕೂಡ್ರಿ ಪಾಟೀಲರೇ.

ಮಾನ್ಯ ಅಧ್ಯಕ್ಷರೇ, ಇತ್ತ ವಿರೋಧಪಕ್ಷದ ಸದಸ್ಯರುಗಳು ರಾಜ್ಯದಲ್ಲಿ ಕ್ಷಾಮದ ಪರಿಸ್ಥಿತಿ ಕುರಿತು ಒಂದು ವರದಿಯನ್ನು ಸರ್ಕಾರಕ್ಕೊಪ್ಪಿಸಲು ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಒಂದು ಹೇಳಿಕೆ ಈ ಸಭೆಯಲ್ಲಿ ಹೊರಬಿದ್ದಿತ್ತು. ಆ ಸಮಿತಿಯಲ್ಲಿ ಆಡಳಿತಪಕ್ಷದಿಂದ 11 ಜನ ಸದಸ್ಯರುಗಳು ಮತ್ತು ಇನ್ನು 9 ಜನ ಸದಸ್ಯರುಗಳನ್ನು ಬೇರೆ ಬೇರೆ ಪಕ್ಷಗಳಿಂದ ಆರಿಸಿ ಸೇರಿಸಲಾಗಿದ್ದಿತು. ಆದರೆ ಆ ಸಮಿತಿಯಲ್ಲಿ ಸದಸ್ಯರನ್ನು ಸೇರಿಸಲು ಕೈಬಿಟ್ಟಿದ್ದ ಪಕ್ಷಗಳೂ ಅನೇಕ ಇರುತ್ತವೆ. ಉದಾಹರಣೆಗೆ ಜನತಾ ಪಕ್ಷ, ಎಂ. ಇ. ಎಸ್. ಇತ್ಯಾದಿ. ಆದರೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಕ್ಯಾಬಿನೆಟ್‌ನಲ್ಲಿರತಕ್ಕ ಎಲ್ಲಾ ಮಂತ್ರಿಗಳೂ ಆ ಕ್ಷಾಮಪೀಡಿತ ಪ್ರದೇಶಗಳಿಗೆ ಒಂದಾವರ್ತಿಯಲ್ಲ ಹತ್ತಾರು ಸಲ ಹೋಗಿ ಬಂದಿರುತ್ತಾರೆ. ಹಾಗಿರುವಾಗ ಅವರ ಪಕ್ಷದಿಂದ 11 ಜನರು ಹೋಗಬೇಕಾದ ಪರಿಸ್ಥಿತಿ ಇರಲಿಲ್ಲ. ವಿರೋಧಪಕ್ಷವನ್ನು ಉದ್ದೇಶಪೂರ್ವಕವಾಗಿಯೇ ತುಳಿಯಬೇಕೆಂಬ ದೃಷ್ಟಿಯಿಂದ ಹಾಗೂ ಯಾವುದೋ ಒಂದು ಸಂಧಾನದಿಂದ ಅವರ ಸಂಖ್ಯೆ 11 ಆಗಿದೆ. ಈ ಕಡೆಗೆ ಕೇವಲ 9 ಜನರನ್ನು ಕೊಟ್ಟಿರುವುದು ನಿಜವಾಗಿಯೂ ನ್ಯಾಯವಾದುದಲ್ಲ. ಇದರಿಂದ ನ್ಯಾಯ ಸಮನಾಗಿ ದೊರಕುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ವಿರೋಧಪಕ್ಷವನ್ನು ತುಳಿಯತಕ್ಕ ಒಂದು ಕಾರ್ಯಕ್ಕೆ ಏಕೆ ಹೋದರೋ ಗೊತ್ತಾಗಲಿಲ್ಲ. ಈಗ ನಾನು ಅವರ ಮೇಲೆ ಇದರ ಬಗ್ಗೆ ಒಂದು ಗುರುತರವಾದ ಆರೋಪವನ್ನು ಮಾಡುತ್ತಿದ್ದೇನೆ. ಈ ಪಟ್ಟಿಯನ್ನು ಮೊದಲೇ ಮುಖ್ಯಮಂತ್ರಿಗಳು ಮಾಡಿದ್ದಾರೆಯೋ ಅಥವಾ ಅವರ ಪಕ್ಷದವರೆಲ್ಲರೂ ಸೇರಿ ತೀರ್ಮಾನ ಮಾಡಿದರೋ ನನಗೆ ಗೊತ್ತಾಗಲಿಲ್ಲ. ಈ ಸಭೆಯಲ್ಲಿ ಕೇವಲ ಎರಡು ಮೂರು ಮಾತ್ರ ವಿರೋಧ ಪಕ್ಷಗಳಿವೆಯೆಂದು ತಿಳಿದರೋ ಏನೋ ಗೊತಿ ಲ್ಲ. ವಿರೋಧ ಪಕ್ಷದವರು ಹೇಗಾದರೂ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ, ನಾವೇನು ಹೇಳಿದರೂ ನಮ್ಮ ಕಡೆ ಮೆಜಾರಿಟಿ ಇದೆ, ಅವರು ಒಪ್ಪಿಕೊಳ್ಳಬೇಕೆಂದು ಹೇಳತಕ್ಕ ಮನೋಭಾವನೆ ಇವರಿಗೆ ಬಂದಿರಬೇಕೆಂದು ನಾನು ಹೇಳುತ್ತೇನೆ. ಒಂದುವೇಳೆ ಆ ರೀತಿ ಮಾಡಿದರೆ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಒಂದು ಗುರುತರವಾದ ಜವಾಬ್ದಾರಿ ಹಾಗೂ ಕರ್ತವ್ಯದಲ್ಲಿ ಲೋಪ ಮಾಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ಆರೋಪಣೆ ಮಾಡಬೇಕಾಗುತ್ತದೆ. ಯಾವ ಕಾರಣದಿಂದ ಈ ರೀತಿ ಮಾಡಿದರೋ ಎಂಬುದೇ ನನಗೆ ಗೊತ್ತಾಗುತ್ತಾ ಇಲ್ಲ. ಈಗ ಈ ನ್ಯೂಡಿ ಟೀಂ ಸಹ ಹೋಗಬೇಕೇ ಬೇಡವೇ ಎಂಬ ಬಗ್ಗೆ ಒಂದು ಸಂಶಯ ಈಗಾಗಲೇ ಬಂದಿದೆ. ಕೇವಲ 11 ಜನ ಆಡಳಿತ ಕಾಂಗ್ರೆಸ್ಸಿನವರು ಮಾತ್ರ ಅಲ್ಲಿಗೆ ಹೋಗಬೇಕೇ ಎಂಬ ಪ್ರಶ್ನೆ ಬಂದಿದೆ. ಇದನ್ನು ಜವಾಬ್ದಾರಿಯುತವಾಗಿ ಸರ್ಕಾರ ನಡೆಸಬೇಕಾಗಿದೆ. ಈಗ ಕ್ಷಾಮದ ದವಡೆಗೆ ಸಿಕ್ಕಿ ನರಳುತ್ತಿರುವ ಜನತೆಗೆ ನ್ಯಾಯವನ್ನು ದೊರಕಿಸಿ ಕೊಡುವುದರಲ್ಲಿ ಮೊದಲಿನಿಂದಲೂ ಒಂದು ಒಮ್ಮತದಿಂದ ನಾವೂ, ನೀವೂ ನಡೆಯಬೇಕೆಂದು

(ಶ್ರೀ ಪಾಟಾಳ್ ನಾಗರಾಜ್)

ಮಾತನಾಡಿದರೂ ಈಗ ಆ ಮಾತಿನ ಪ್ರಕಾರ ಇವತ್ತು ನಡೆಯುತ್ತಾ ಇಲ್ಲ. ಯಾರ ಒತ್ತಾಯದ ಮೇರೆ ಈ ರೀತಿಯಾಗಿ ನೀವು ಒಪ್ಪಿಕೊಂಡಿರಿ ಎಂದು ನಿಮ್ಮ ಪಕ್ಷದಲ್ಲಿ ಕೇಳಿದಾಗ ನೀವು ಆಗ ಅದಕ್ಕೆ ಡಿಫೆಂಡ್ ಮಾಡಿದಿರಿ, ನಾನು ಒಪ್ಪಿದ್ದು ನಿಜವೆಂದು ಹೇಳಿದಿರಿ. ಅದಾಲ್ಲಿ ನ್ಯಾಯವಿದೆಯೆಂದು ಹೇಳಿದಿರಿ. ಪಾರ್ಟಿಯವರು ಮ್ಯಾಂಡೇಟ್ ತೆಗೆದುಕೊಂಡು ಮಜಾರಿಟಿ ಇದೆಯೆಂದು ಆ ರೀತಿ ಮಾತನಾಡಿದಿರಿ. ಆದರೆ ಪೆಬ್ಲಿನರಿಟಿಯಲ್ಲಿ ನಾವು ಇದ್ದೇವೆಂದು ತಿಳಿದು ತಾವು ವಿರೋಧಪಕ್ಷದ ಅನೇಕ ಜನರನ್ನು ತುಳಿಯುವುದು ನಿಜವಾಗಿ ಪ್ರಜಾಪ್ರಭುತ್ವದ ಲಕ್ಷಣವಲ್ಲ. ಈ ಪಟ್ಟಿಯಲ್ಲಿ ಸೇರಿಸಿರತಕ್ಕ ಹೆಸರುಗಳ ಹೈಕಿ ಬಹುಶಃ ಕೆಲವರ ಹೆಸರುಗಳು ಇಲ್ಲದೇ ಇರುವುದು ವಿಷಾದಕರ. ಗುಲ್ಬರ್ಗಾ ಮತ್ತು ಬಿಜಾಪುರಗಳಿಂದ ಕೆಲವು ವಿದ್ಯಾರ್ಥಿಗಳು ಅವರ ಕ್ಷೇತ್ರದ ಎಂ.ಎಲ್.ಎ.ಗಳು ಸತ್ಯಾಗ್ರಹ ಮಾಡುತ್ತಿದ್ದರೆ, ಅವರಿಗೆ ಕೊಡಬೇಕೆಂದು ನನಗೆ ಅರಿಸಿನ ಮತ್ತು ಬಳೆಗಳನ್ನು ಕಳುಹಿಸಿದ್ದಾರೆ. ಈ ವಿಚಾರ ಈಗಾಗಲೇ ಪತ್ರಿಕೆಗಳಲ್ಲಿ ಬಂದಿದೆ. ನಾನು ಅವನ್ನು ಈ ಸಭೆಯಲ್ಲಿ ಅವರಿಗೆ ಕೊಡುವುದಕ್ಕೆ ತಯಾರಾಗಿಲ್ಲ. ನಾನು ಅವನ್ನು ತಂದಿಟ್ಟಿದ್ದೇನೆ. ಒಂದು ವೇಳೆ ಅವನ್ನು ನಾನು ಈ ಸಭೆಯಲ್ಲಿ ತಂದು ಅವರಿಗೆ ಕೊಟ್ಟರೆ ಅದನ್ನೇ ಇಲ್ಲಿ ಬಹಳ ದೊಡ್ಡದಾಗಿ ಮಾಡಿಬಿಡುತ್ತಾರೆ.

ಒಬ್ಬ ಮಾನ್ಯ ಸದಸ್ಯರು.— ನಿಮಗೂ ಅವರು ಅವನ್ನು ಕಳುಹಿಸಿದ್ದಾರೆಯೇ ?

ಶ್ರೀ ಪಾಟಾಳ್ ನಾಗರಾಜ್.—ನನಗೆ ಅವರು ಎಂದೆಂದಿಗೂ ಕಳುಹಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಾನು ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ವಿರೋಧ ಪಕ್ಷದವರನ್ನು ತುಳಿಯುವ ದೃಷ್ಟಿಯನ್ನಿಟ್ಟುಕೊಂಡು ಯಾವ ಟೀಂ ನಿಮ್ಮದು ಅಲ್ಲಿಗೆ ಹೋದರೂ ಏನೂ ಪ್ರಯೋಜನ ವಿಲ್ಲ. ಮೊದಲನಿಂದ ಒಳಗೊಳಗೇ ಯಾವುದೋ ಒಂದು ರಾಜಕೀಯವನ್ನು ಇಟ್ಟುಕೊಂಡು ನಿರ್ಮಾಣ ಮಾಡಿದಂಥ ಕಮಿಟಿ ಏನಿದೆಯೋ ಅದು ನಿಜವಾಗಿ ಒಳ್ಳೆಯ ಕಮಿಟಿಯಲ್ಲ. ಇದರ ಬಗ್ಗೆ ನಿಮ್ಮದು ಬಹಳ ಗುರುತರವಾದ ಜವಾಬ್ದಾರಿಯಾಗಿದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಎಂ.ಇ.ಎಸ್. ಅವರು ಇಲ್ಲಿ 4 ಜನರಿದ್ದಾರೆ. ಅವರ ಹೈಕಿ ಅವರಲ್ಲಿ ಯಾರೂ ಇಲ್ಲ. ಜನತಾ ಪಕ್ಷದವರಲ್ಲಿಯೂ ಯಾರೂ ಇಲ್ಲ. ಡಿ.ಎಂ.ಕೆ. ಅವರಲ್ಲಿಯೂ ಯಾರೂ ಇಲ್ಲ ಮಾನ್ಯ ಶ್ರೀ ಪಾಟಾಳ್ ನಾಗರಾಜ್ ಅವರನ್ನೇ ಮುಖ್ಯವಾಗಿ ಬಿಟ್ಟುಬಿಟ್ಟಿದ್ದಾರೆ. ಈ ರೀತಿಯಲ್ಲಿ ಇವರನ್ನು ಬಿಟ್ಟಿರುವುದಕ್ಕೆ ಕಾರಣನೇನು ?

ಶ್ರೀ ಪಾಟಾಳ್ ನಾಗರಾಜ್.—ನನ್ನನ್ನು ಅವರು ಕರೆದುಕೊಂಡು ಹೋಗದಿದ್ದರೂ ನಾವೇ ಖಾನಗಿಯಾಗಿ ಆ ಸ್ಥಳಗಳಿಗೆ ಹೋಗಿ ನೋಡಿಕೊಂಡು ಬರುತ್ತೇನೆ. ನಭೆ ಸಮಾರಂಭಗಳಲ್ಲಿ ಭಾಗವಹಿಸಿಯಾದರೂ ನೋಡಿಕೊಂಡು ಬರುತ್ತೇನೆ. ಆದರೆ ವಿರೋಧ ಪಕ್ಷದ ಬಗ್ಗೆ ಆಡಳಿತ ಪಕ್ಷದವರು ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಎಂಬ ದೃಷ್ಟಿಯಿಂದ ನೋಡುತ್ತಿದ್ದಾರೆ.

†Sri C. M. ARUMUGAM (K.G.F.).—I wish to say a few words regarding the constitution of the Study Team. We have authorised the Leader of the Opposition not only to name the persons but also to decide the number of persons to be included in the team. There are 20 Members. First of all, I submit to this House and to you Madam Speaker, that 20 Members is too unwieldy for a Study Team. It can be converted as a sight-seeing team but not a Study Team. Add to that ten more officers. It will not be possible for the Study Team to visit the affected villages—to visit the remotest corners of Gulbarga, Belgaum, Bijapur and other areas. Therefore, first of all, it should be a very compact team consisting of about 7-8 Members or nine Members. I was happy when the Hon'ble Chief Minister was saying that he will send a Study Team of five Members. In fact, our Leader of the Opposition was insisting that it should be increased to at least 11 or 12, but now, it has

gone up to 20. It has come to the notice of the general public that there is a little politics in it. Only nine members from the Opposition are included and two political parties have not been included. Hence, my submission is that two more Members from these parties should be included. Apart from that, there is a feeling both inside and outside the House, particularly in the Gulbarga area that the Government have increased the Members of the ruling Party in order to dilute the matter or in order to put in an ineffective report. In fact, it was our desire and it had been agreed to that the team should include less than nine Members or ten Members, but they have increased it to 20. That is the feeling. That is one thing which the Hon'ble Chief Minister will have to consider. Point No. 2 is that having raised it to 20, inclusion of a few more members makes no difference. Another thing. After we decided to send a study team, some officers have been sent to Gulbarga and other areas and some officers have been transferred from there and this is on account of the impending tour of the study team. It is our feeling—the Leader of the Opposition will say about our feelings—that 20 Members is too unwieldy as Mr. Nagaraj correctly put it. And, there is no need for the persons coming from Gulbarga to be included in the team. The report must be impartial. It should speak correctly of the situation prevailing in Gulbarga. Nothing should be pressurised and nothing should be influenced on this committee.

Sri D. DEVARAJ URS.—Nothing should be exaggerated.

Sri C. M. ARUMUGAM.—There is no exaggeration also. Madam Speaker, we feel that the Committee should not consist of more than 9 or 10 Members. Somehow my name is also included though I did not want it. Probably, the Hon'ble Chief Minister took a little interest or showed a little sympathy towards me and included me so that I may see Gulbarga. In fact, from some villages, I have received telegrams that people have abandoned cattle, which they have brought and left near the temples and migrated to Andhra and Maharashtra. Reports are there to this effect. There are also starvation deaths due to famine. At any rate, these reports cannot be construed as exaggeration. These facts have been informed not only to me, but to other Members of the Assembly—both of the Opposition and of the ruling party. The strength of the study team is unwieldy. That is my submission. Madam Speaker, the number is before you. 20 is too unwieldy a number. I only submit that you should decide the strength and also as to who should be included in the Committee. There are Ministers who represent Gulbarga and Belgaum areas. Mr. Kithoor is there. They have got their own reports about the situation. But we have got to get a true picture of the whole thing. We should take the report from the people of the areas. The report should be an impartial one. This is my submission.

(SRI C. M. ARUMUGAM)

The Committee appointed by the House should have the sanction of the Speaker. If you send it, we do not make this Committee in any way a political affair. It should not be just like the Public Accounts Committee or any other Standing Committee. We work as a single party in the P.A.C. and other Standing Committees. Therefore, this Drought-affected Area Study Team is too unwieldy. It is impossible for those Members to go about to the places and submit a report bebfore 16th. Hence the strength of the Team should be reduced. How to reduce the number? By eliminating some Members from that side; that is the only solution. For reducing the number, we are not taking the credit. In fact, the credit goes to the Leader of the Opposition and the Leader of the House. Had it not been for the generous attitude taken by the Hon'ble Chief Minister, the Leader of the House, the very fact of constituting the Committee would not have seen the light of the day. Therefore, we give complainment to the Chief Ministr, the Leader of the House. What we submit is that he has put more number of Members than required from his Party. Therefore they may be eliminated so as to bring down the total number to 9 or 10 or 12. For that, 9 are already included from the Opposition; to it 3 more may be added from the Opposition and the number from the ruling party limited to 3; making the total 15 to go round, discharge its duties and submit the most non-controversial Report to this House. If an unwieldy Committee is constituted the purpose for which it is constituted and the object with which it is constituted, will be defeated. I support Sri Vatal Nagaraj's demand to include a few more from the Opposition so that the opposition parties which are functioning from outside may also have representation in the Study Team; they may be accommodated by reducing the bulk of Members from Congress (R).

ಶ್ರೀ ಬಾಪು ಗೌಡ ರಾಯಪ್ಪ (ಶಹಪುರ್).—ಈಗ ಗುಲ್ಬರ್ಗ ಮತ್ತು ಬೀದರ್‌ನಲ್ಲಿರುವ ನಿಜವಾದ ಪರಿಸ್ಥಿತಿ ಏನಿದೆ, ಅದನ್ನು ತಿಳಿದುಕೊಳ್ಳುವ ಉದ್ದೇಶದಿಂದ ಈ ಕಮಿಟಿಯನ್ನು ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೆ. ಅದರೆ ಅದನ್ನು ರಚನೆ ಮಾಡುವುದಕ್ಕೆ ಬಹಳ ಸಮಯ ತೆಗೆದುಕೊಂಡು ಇನ್ನೂ ಅದರ ಕಾರ್ಯ ಪ್ರಾರಂಭವಾಗಿಲ್ಲ. ಹಿಂದೆ ಆ ಪ್ರದೇಶಕ್ಕೆ ಫೂರ್ಪಡೆಯವರು ಬಂದಾಗ ಸ್ವಲ್ಪ ಕೆಲಸವಾಗಿದೆ. ಆ ನಂತರ ಹಲವು ಮಂತ್ರಿಗಳು ಬಂದಿದ್ದರು. ಆದರೆ ಹೆಚ್ಚಿನ ಕೆಲಸಕಾರ್ಯಗಳು ಏನೂ ಆಗಿಲ್ಲ. ಕೊನೆಗೆ ಮಾನ್ಯ ಕೆ. ಎಚ್. ಪಾಟೀಲರು ಬಂದರು. ಅವರು ಬಂದ ನಂತರ ಸ್ವಲ್ಪ ಕೆಲಸಗಳಾಗಿವೆ. ಅಲ್ಲಿನ ಪರಿಸ್ಥಿತಿಯನ್ನು ತಿಳಿದುಕೊಂಡರೂ ಈ ಕಮಿಟಿಯನ್ನು ಮಾಡುವುದಕ್ಕೆ ವಿಳಂಬ ಮಾಡಿದಂತೆ ಕಾಣುತ್ತದೆ. ಇದರಲ್ಲಿ ರಾಜಕೀಯ ಬರುವಂತೆ ಮಾಡಿದ್ದಾರೆ. ಹೀಗೆ ಮಾಡುವುದರಿಂದ ಅಲ್ಲಿನ ಪರಿಸ್ಥಿತಿಯ ಬಗ್ಗೆ ಒಂದು ಸಂಪೂರ್ಣವಾದ ನೈಜ ಚಿತ್ರ ನಮಗೆ ಸಿಗುವುದಿಲ್ಲ. ಅಲ್ಲದೆ ಈಗ ಅಲ್ಲಿಗೆ ನಮ್ಮ ಕಮಿಟಿ ಹೋಗುತ್ತದೆ ಎಂದು ಅಲ್ಲಿ ಕೆಲಸ ಮಾಡುವಂತಹ ಟೀಮನ್ನು ಕಳುಹಿಸಿದ್ದಾರೆ. ಬೇಕಾದರೆ ಇವರು ಒಂದು 5 ಜನರ ಟೀಮನ್ನೇ ಕಳಿಸಿಲಿ, ಆದರೆ ಇದರಲ್ಲಿ ರಾಜಕೀಯ ಮಾಡುವುದು ಬೇಡ. ಅಲ್ಲಿಗೆ ಯಾರೇ ಹೋಗಲಿ, ಅಲ್ಲಿರತಕ್ಕ ಜನರು 2—3 ತಿಂಗಳಿಂದ ಏನು ಕೆಲಸ ಕಾರ್ಯಗಳು ನಡೆದಿವೆ ಅದರ ಬಗ್ಗೆ ಮಾಹಿತಿ ಕೊಡುತ್ತಾರೆ. ಬೇಕಾದರೆ ನೀವು ಒಬ್ಬ ಸೆಕೆಂಡ್ಸ್ ಜಡ್ಜ್‌ನ್ನು ಕಳಿಸಿರಿ. ಈಗಾಗಲೇ ಸಾಕಷ್ಟು ಇದರಲ್ಲಿ ವಿಳಂಬವಾಗಿದೆ. ಆದ್ದರಿಂದ ನೀವು ಬೇಕಾದರೆ ಒಂದು ಸಣ್ಣ ಗುಂಪನ್ನು ಮಾಡಿ ಕಳಿಸಿರಿ. ಆದರೆ ಅವರು

ಅಲ್ಲಿನ ನಿಜ ಪರಿಸ್ಥಿತಿಯನ್ನು ಅರಿತು ಒಂದು ನ್ಯಾಯವಾದ ರಿಪೋರ್ಟನ್ನು ಕೊಡುವಂತೆ ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಏನೂ ಹೆಚ್ಚಿಗೆ ಹೇಳುವುದಿಲ್ಲ. ನಾವು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಒಪ್ಪಿಕೊಂಡಿರುವುದು. ಈಗ ಸಂಖ್ಯೆ ಜಾಸ್ತಿಯಾಗಿದೆ; ಕಡಿಮೆ ಮಾಡಿ ಎಂದು ಹೇಳುವುದಾದರೆ, ಮಾಡೋಣ. ಅದೂ ಒಂದು ಲೆಕ್ಕದಲ್ಲಿ ಸರಿಯೆ. ವಿರೋಧ ಪಕ್ಷದಲ್ಲಿ ಎಲ್ಲ ಪಕ್ಷಗಳೂ ಸೇರಿಕೊಂಡು ಇರುವುದರಿಂದ ಎಲ್ಲಾ ಪಕ್ಷಗಳ ಪ್ರತಿನಿಧಿಯನ್ನು ಹಾಕಬೇಕೆಂದು ಹೇಳಿದರೆ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಅದೇ ರೀತಿ ಪಟ್ಟಿಯಲ್ಲಿ ಯಾರ ಹೆಸರನ್ನಾದರೂ ಸೇರಿಸಬೇಕೆಂದರೆ, ಅವಕ್ಕೂ ನನ್ನ ಅಭ್ಯಂತರವೇನೂ ಇಲ್ಲ. ಎರಡನೆಯದಾಗಿ ಮಾನ್ಯ ಸದಸ್ಯರಿಗೆ ಇವರಲ್ಲಿ ರಾಜಕೀಯ ಬಂದಿದೆ ಎಂಬ ಅನುಮಾನ ಬಂದಿದೆ. ಅವರ ಮನಸ್ಸಿಗೆ ಅನುಮಾನ ಬಂದರೆ ಅದಕ್ಕೆ ನಾನು ಏನು ಹೇಳಬೇಕೆಂದು ತಿಳಿಯುವುದಿಲ್ಲ. ಅನುಮಾನ ಯಾರಿಗಾದರೂ ಇದ್ದರೆ ಅದನ್ನು ಬದಲಾಯಿಸುವುದಕ್ಕಾಗುವುದಿಲ್ಲ. ಇದರಲ್ಲಿ ಏನೂ ರಾಜಕೀಯವಿಲ್ಲವೆಂದು ನೀವೂ ನಾವೂ ಒಪ್ಪಿಕೊಂಡ ಮೇಲೆ, ಪುನಃ ಇದೆಯೆಂದು ಹೇಳುವುದಾದರೆ, ನಾನು ಏನು ಹೇಳುವುದು? ನಮ್ಮಲ್ಲಿ ರಾಜಕೀಯ ಇದೆಯೆಂದು ನೀವು ಪುನಃ ಹೇಳುವುದಾದರೆ, ನಿಮ್ಮಲ್ಲಿ ರಾಜಕೀಯ ಇದೆ ಎಂದು ನನಗೆ ಅನುಮಾನ ಬಂದಿದೆ. ಈಗ ನಾನು ಒಂದು ಸಲಹೆ ಕೊಡುತ್ತೇನೆ. ಇದು ಯಾವುದೂ ಬೇಡವಾದರೆ ನನ್ನ ಸಲಹೆ ಏನೆಂದರೆ—I am prepared for the constitution of One-man Committee. Sri C. M. Arumugam shall be the One-man Committee. Let him go and bring a report. I am agreeable to it. I want all other friends to accept it or reject it. This is all I say.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಯವರು ಒಂದು ಹೊಸ ಸಲಹೆಯನ್ನು ಇಟ್ಟಿದ್ದಾರೆ. ಒನ್ ಮ್ಯಾನ್ ಕಮಿಟಿ ಕಳುಹಿಸಿದರೆ ಒಳ್ಳೆಯದು ಎಂದು ಹೇಳಿದ್ದಾರೆ. ಸಂತೋಷ ಒಳ್ಳೆಯದು. ಆದರೆ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿದ ಹಿನ್ನಲೆ ಬಗ್ಗೆ ಹೇಳುವುದಾದರೆ ವಿರೋಧ ಪಕ್ಷಗಳು ಒಂದು ಪಕ್ಷವಾಗಿ ಕೆಲಸ ಮಾಡುತ್ತಾ ಇಲ್ಲ; ಶಾಸನ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವಾಗ ವಿರೋಧ ಪಕ್ಷದಲ್ಲಿ ಹಲವು ಪಕ್ಷಗಳು ಸೇರಿ ಒಂದಾಗಿರುತ್ತದೆ. ಅದರಲ್ಲಿ ಕಾಂಗ್ರೆಸ್ (ಒ) ಇದೆ, ಜನತಾ ಪಕ್ಷ ಇದೆ, ಎಸ್.ಎಸ್.ಪಿ ಇದೆ ಹಾಗೂ ಇತರ ಪಕ್ಷಗಳು ಇವೆ. ಕೆಲವು ವಿಷಯದಲ್ಲಿ ಎಲ್ಲರೂ ಒಪ್ಪಬಹುದು; ಕೆಲವು ವಿಷಯದಲ್ಲಿ ಒಪ್ಪದೆ ಇರಬಹುದು. ಅದರಲ್ಲೂ ಕ್ಷಾಮ, ಬರಗಾಲದ ಪರಿಹಾರದ ಬಗ್ಗೆ ಚರ್ಚೆ ಮಾಡುವುದಕ್ಕೆ, ಮುಂಚೆ ಈ ಸಭೆಯು ಒಂದು ಟೀಮನ್ನು ಕಳುಹಿಸಿ ಅವರು ನೋಡಿಕೊಂಡು ಬಂದು ವರದಿ ಮಾಡಿದ ಮೇಲೆ ಚರ್ಚೆ ಮಾಡಬಹುದು ಎಂದು ಎಲ್ಲ ಸದಸ್ಯರೂ ತಮ್ಮ ಒಮ್ಮತದ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಈಗ ವಾಟಾಳ್ ನಾಗರಾಜ್ ಮತ್ತು ಶಾಮಣ್ಣನವರು ಎಲ್ಲಾ ವಿರೋಧ ಪಕ್ಷಗಳ ಸದಸ್ಯರನ್ನೂ ಸೇರಿಸಿಲ್ಲವೆಂದು ಹೇಳಿದರು.

3-00 P.M.

ಇದರಲ್ಲಿ ನಾವು ರಾಜಕೀಯ ಮಾಡಬೇಕು ಎನ್ನುವುದೇನೂ ಇಲ್ಲ. ಇದನ್ನು ರಾಜಕೀಯವಾಗಿ ನೋಡತಕ್ಕದ್ದು ಯೋಗ್ಯವೂ ಅಲ್ಲ. ಇದನ್ನು ಮಾನವೀಯತೆಯ ದೃಷ್ಟಿಯಿಂದ ಬಿಡಿಸತಕ್ಕ ಕಾಲದಲ್ಲಿ ಈ ಸಭೆಯು ಒಂದು ಟೀಮನ್ನು ಅಲ್ಲಿಗೆ ಕಳುಹಿಸಬೇಕು ಎನ್ನುವ ದೃಷ್ಟಿಯಿಂದ ಪಕ್ಷಾತೀತವಾದ ಒಂದು ಟೀಮನ್ನು ಕಳುಹಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಒಂದು ಅಭಿಪ್ರಾಯವನ್ನು ಸೂಚಿಸಿದ್ದಾರೆ. ಆ ಬಗ್ಗೆ ಶ್ರೀಮಾನ್ ಅರುಮುಗಂ ಅವರು ಒಂದು ಕಾಂಟ್ರವರ್ಷಿ ಇಲ್ಲದ ವರದಿಯನ್ನು ಕೊಡಬೇಕೆಂದು ಹೇಳಿದ್ದಾರೆ. ಮತ್ತು ಯಾವುದೇ ಒಂದು ರಾಜಕೀಯ ಬಣ್ಣವೂ ಇಲ್ಲದೇ ಇರತಕ್ಕಂಥಾ ಮತ್ತು ನಿಷ್ಪಕ್ಷಪಾತವಾದ ವಸ್ತು ಸ್ಥಿತಿ ಏನಿದೆ ಅದನ್ನು ಅಧ್ಯಯನ ಮಾಡಿ ಒಂದು ವರದಿಯನ್ನು ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಒಂದು ಸೂಚನೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಶ್ರೀಮಾನ್ ವಾಟಾಳ್ ನಾಗರಾಜ್ ಅವರು ನಾನು ನನ್ನ ಸ್ನೇಹಿತ ಖರ್ಚಿನಲ್ಲೇ ಆ ಅಭಾವಪೀಡಿತ ಪ್ರದೇಶಗಳಿಗೆ ಹೋಗಿ ನೋಡಿಕೊಂಡು ಬರುತ್ತೇನೆ ಎಂದು ಹೇಳಿದರು. ಈ ಮಾನ್ಯ ಸಭೆಯಲ್ಲಿ ಮೊನ್ನೆ ನನ್ನ ನಿರ್ಣಯವನ್ನು ಒಪ್ಪಿಕೊಂಡಮೇಲೆ ಈ ಟೀಮ್ ಕಳುಹಿಸುವ ವಿಷಯದಲ್ಲಿ ಅಧ್ಯಕ್ಷರ ಕೊಠಡಿಯಲ್ಲಿ ಚರ್ಚೆ ಮಾಡಿ 5 ಜನಗಳಿಂದ ಕೂಡಿರುವ ಒಂದು ಟೀಮನ್ನು ಅಲ್ಲಗೆ ಕಳುಹಿಸಿದರೆ ಸಾಕು; ಅದರಲ್ಲಿ 3 ಜನ ವಿರೋಧ ಪಕ್ಷದವರು, ಇಬ್ಬರು ಆಡಳಿತ

(ಶ್ರೀ ಎಚ್. ಡಿ. ದೇವೇಗೌಡ)

ಪಕ್ಷದವರು ಇದ್ದರೆ ಸಾಕು ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. ಆಗ ನಾನು ಹೇಳಿದೆ ವಿರೋಧಪಕ್ಷದಲ್ಲಿ ಕೆಲವು ಗುಂಪುಗಳು ಇವೆ. ಆದ್ದರಿಂದ ಇದರಲ್ಲಿ ಸ್ವಲ್ಪ ಕನ್ಸರ್ಟ್ ಮಾಡಿ ಯಾರು ಯಾರನ್ನು ಅದರಲ್ಲಿ ಹಾಕಬೇಕು ಎನ್ನುವ ಭಗ್ಗೆ ಸ್ವಲ್ಪ ಬದಲಾವಣೆ ಮಾಡೋಣ ಎಂದು ನಾನು ಹೇಳಿದೆ. ಅದಕ್ಕೆ ಮುಖ್ಯ ಮಂತ್ರಿಗಳು ಬೇಡಿ ನಾವೇ ತೀರ್ಮಾನ ಮಾಡೋಣ ಎಂದು ಹೇಳಿದರು. ಅದನ್ನು ನಾನು ಒಪ್ಪಿಕೊಂಡೆ. ಆ ಮೇಲೆ ಮಾರನೆಯ ದಿವಸ ನಾನು ಮಾನ್ಯ ಮುಖ್ಯ ಮಂತ್ರಿಗಳ ಚೇಂಬರಿಗೆ ಹೋಗಿದ್ದೆ, ಆಗ ನಾನು ಒಂದು ಪಟ್ಟಿಯನ್ನು ಬರೆದು ಅದರಲ್ಲಿ ವಿರೋಧ ಪಕ್ಷದವರು 10 ಜನ ಟೀಮಿನಲ್ಲಿ ಇರಬೇಕು, 10 ಜನ ಅಡಳಿತ ಪಕ್ಷದವರು ಇರಬೇಕು ಆ ರೀತಿ ಮಾಡಿದರೆ ಒಳ್ಳೆಯದು ಎಂದು ನಾನು ಸೂಚಿಸಿ ಬಂದಿದ್ದೆ. ಮಾರನೇ ದಿವಸ ಅವರ ಹತ್ತಿರ ಹೋದಾಗ ಆ ಪಟ್ಟಿಯಲ್ಲಿ 8 ಜನ ಆಳುವ ಪಕ್ಷ, 4 ಜನ ನಮ್ಮ ಪಕ್ಷದಲ್ಲಿ ಸೇರಿಸುತ್ತೇನೆ ಎಂದು ಹೇಳಿದರು ಆ ಮೇಲೆ ಆ ಬಗ್ಗೆ ಕೆಲವು ವಿರೋಧ ಪಕ್ಷದವರು ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು ಎಂದು ನನ್ನ ಭಾವನೆ. ಇದರಿಂದ ಇನ್ನು ಕೆಲವು ಜನಗಳನ್ನು ಈ ಪಟ್ಟಿಯಲ್ಲಿ ಸೇರಿಸಬೇಕು ಎಂದು ಹೇಳಿದರು. ಆ ಮೇಲೆ ಶುಕ್ರವಾರ ಮಾನ್ಯ ಮುಖ್ಯ ಮಂತ್ರಿಗಳು 10 ಜನ ಅಡಳಿತ ಪಕ್ಷದವರು 8 ಜನ ವಿರೋಧ ಪಕ್ಷದವರನ್ನು ಸೇರಿಸುವುದಾಗಿ ಹೇಳಿದರು. ಆಗ ನಾನು ಹೇಳಿದೆ ತಮಗೆ ಆ ಪಟ್ಟಿಯಲ್ಲಿ ಇನ್ನೂ ಕೆಲವು ಜನಗಳು ಸೇರಿಸಬೇಕು ಎನ್ನುವ ಇಚ್ಛೆ ತಮಗೆ ಇದ್ದರೆ ವಿರೋಧ ಪಕ್ಷದಲ್ಲಿ 10 ಜನ ಸದಸ್ಯರು; ಅಡಳಿತ ಪಕ್ಷದಲ್ಲಿ 10 ಜನ ಸದಸ್ಯರನ್ನು ಪಟ್ಟಿಯಲ್ಲಿ ಸೇರಿಸಬೇಕು ಎಂದು ನಾನು ಹೇಳಿದೆ, ಅದನ್ನು ಲಿಖಿತವಾಗಿ ಬರೆದು ಕೊಟ್ಟೆ. ಅನಂತರ ಮುಖ್ಯ ಮಂತ್ರಿಗಳು ಆ ಪಟ್ಟಿಯವನ್ನು ಶುಕ್ರವಾರ ಸಾಯಂಕಾಲ ಬಿಡುಗಡೆ ಮಾಡಿದರು. ಆ ಟೀಮಿನಲ್ಲಿ ವಿರೋಧ ಪಕ್ಷದ ಕೆಲವು ಗುಂಪುಗಳಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಮಾತ್ರ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈಗ ತಾನೆ ಮಾನ್ಯ ಮುಖ್ಯಮಂತ್ರಿಗಳು ಇದು ಪಕ್ಷಾತೀತವಾಗಿ ನಿರ್ಣಯವಾಗಬೇಕು ಎಂದು ಶ್ರೀಮಾನ್ ಆರ್ಮುಗಂ ಅವರನ್ನು ಒಳಗೊಂಡಂತಹ ಒಂದು ಏಕ ಸದಸ್ಯ ಕಮಿಟಿಯನ್ನು ನೇಮಕ ಮಾಡುತ್ತೇವೆ ಎಂದು ಹೇಳಿದರು. ನನಗೆ ಶ್ರೀಮಾನ್ ಆರ್ಮುಗಂ ಅವರಲ್ಲಿ ವಿಶ್ವಾಸ ಇದೆ. ಅಲ್ಲಿಗೆ ಏಕ ಸದಸ್ಯ ಕಮಿಟಿಯೇ ಹೋಗಲಿ. ನಾನು ಅದನ್ನು ಸ್ವಾಗತಿಸುತ್ತೇನೆ. ಇದರ ಜೊತೆಗೆ ಇದರಲ್ಲಿ ರಾಜಕೀಯವನ್ನು ಬೆಳೆಸಬಾರದು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದನ್ನು ಸ್ವಾಗತ ಮಾಡುತ್ತೇನೆ. ಅಭಾವ ಪೀಡಿತ ಪ್ರದೇಶಗಳಿಗೆ ಏಕೆ ಸದಸ್ಯ ಕಮಿಟಿಯನ್ನೆ ಕಳುಹಿಸೋಣ ಎಂದು ನಮ್ಮ ಎರ್ನಾ ಮಿತ್ರರು ಒಪ್ಪಿಕೊಂಡಿದ್ದಾರೆ. ಆಲ್ಲಿಗೆ ಎಂ. ಎಸ್. ಆರ್. ಟಿ. ಸಿಯ ಬಸ್ಸಿನಲ್ಲಿ ದೊಡ್ಡ ಮೆರವಣಿಗೆಯ ಜಾತಾ ಹೋಗುವುದು ಬೇಡ. ಶ್ರೀಮಾನ್ ಆರ್ಮುಗಂ ಅವರು ಆಸ್ಥಳಕ್ಕೆ ಹೋಗಿ ಅಧ್ಯಯನ ಮಾಡಿ ಒಂದು ವರದಿಯನ್ನು ಈ ಸಭೆಗೆ ಕೊಟ್ಟ ಮೇಲೆ ಅದರ ಮೇಲೆ ಚರ್ಚೆ ಮಾಡುವುದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈಗ ಮಾನ್ಯ ಮುಖ್ಯ ಮಂತ್ರಿಗಳು ಏಕ ಸದಸ್ಯ ಕಮಿಟಿಗೆ ಶ್ರೀಮಾನ್ ಆರ್ಮುಗಂ ಅವರನ್ನು ಏನು ನೇಮಕ ಮಾಡಿದ್ದಾರೆ ಅದನ್ನು ನಮ್ಮ ವಿರೋಧಪಕ್ಷದ ನಾಯಕರು ಸ್ವಾಗತ ಮಾಡಿದರು. ಅವರು ಹೇಳಿದ ಮಾತನ್ನು ನಾನೂ ಒಪ್ಪುತ್ತೇನೆ. ಅದಕ್ಕೆ ನನ್ನ ಸಂಪೂರ್ಣವಾದ ಬೆಂಬಲ ಇದೆ.

ಶ್ರೀ ವಾಟಾಳ್‌ನಾಗರಾಜ್.—ಶ್ರೀಮಾನ್ ಆರ್ಮುಗಂ ಅವರು ಆ ಸ್ಥಳಕ್ಕೆ ಹೋಗಿ ವರದಿ ಮಾಡಿಕೊಂಡು ಬರಲು ಅವರಿಗೆ ಏನೇನು ವ್ಯವಸ್ಥೆ ಬೇಕೋ ಅದನ್ನು ಸರ್ಕಾರದವರು ಕೊಡಬೇಕು.

ಶ್ರೀ ಕೆ. ಎಂ. ನಾಗಣ್ಣ.—ವಾಸ್ತವಾಂಶ ಏನಿದೆಯೋ ಅದನ್ನು ವರದಿಯಲ್ಲಿ ಬರೆಯೆಬೇಕೇ ಹೊರತು ಅವರಲ್ಲಿ ಯಾವ ಕಾಂಟ್ರವರ್ಷಿ ಬರಕೂಡದು ಎಂಬ ಪರತ್ತುಗಳನ್ನು ಹಾಕುವುದು ಬೇಡ ವಾಸ್ತವಿಕ ಪರಿಸ್ಥಿತಿಯನ್ನು ವರದಿ ಮಾಡಬೇಕೆಂದು ನಾನು ಹೇಳುತ್ತೇನೆ.

Notice of Calling attention *re* : Reported Missbehaviour of a Minister in Maharashtra Legislators Home.

ಶ್ರೀ ಟಿ. ಪುಟ್ಟಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ ಮೈಸೂರು ರಾಜ್ಯದ ಒಬ್ಬರು ಸಚಿವರು ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿ ಲೆಜಿಸ್ಲೇಟರ್ಸ್ ಹೋಮಿನಲ್ಲಿದ್ದು ಏನೇನೋ ದುರ್ವ್ಯಹಾರ ಮಾಡಿದರು